ಶ್ರೀ ಆರ್.ವಿ. ದೇಶಪಾಂಡೆ [ಉನ್ನತ ಶಿಕ್ಷಣ ಸಚಿವರು]: ಅಧ್ಯಕ್ಷರೆ, ನಾನು ಈಗಾಗಲೇ ಅತಿಥಿ ಉಪನ್ಯಾಸಕರುಗಳ ಪ್ರತಿನಿಧಿಗಳೊಡನೆ ಚರ್ಚೆ ಮಾಡಿದ್ದೇನೆ, ಹಳೆಯ 3 ವರ್ಷಗಳ ಮಾನಧನದ ಬಾಕಿಯನ್ನು ಕೊಟ್ಟಿದ್ದೇವೆ. ಈ ವರ್ಷ ಪ್ರತಿ ತಿಂಗಳು ತಪ್ಪದೆ ಮಾನಧನ ಸಿಗುತ್ತಿದೆ. ಅದು ಸ್ವಲ್ಪ ಹೆಚ್ಚಾಗಬೇಕೆಂದು ಹೇಳುತ್ತಿದ್ದಾರೆ, ಅದನ್ನು ಸ್ವಲ್ಪ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೇವೆ. ಅವರು ನಮಗೆ continuity ಕೊಡಿ ಎಂದು ಹೇಳುತ್ತಿದ್ದಾರೆ. continuity ಕಾಯಿದೆ, ಕಾನೂನು ಚೌಕಟ್ಟಿನಲ್ಲಿ, ಕೊಡುವುದು ಕಷ್ಟ, ಏಕೆಂದರೆ, ಕಳೆದ ಸಾರಿ ಅವರನ್ನು ಏನು ನಾವು ನೇಮಕಾತಿ ಮಾಡಿದ್ದೇವೆ, ಅದು ಪಾರದರ್ಶಕವಾಗಿ ಮತ್ತು ಅವರ ಅನುಭವ ಹಾಗೂ ಶಿಕ್ಷಣ ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಮಾಡಿದ್ದೇವೆ. ಕಾನೂನಿನ ಚೌಕಟ್ಟಿನಲ್ಲಿ ಯಾವ ರೀತಿ ಸಹಾಯ ಮಾಡಲು ಸಾಧ್ಯ ಆ ರೀತಿ ಮಾಡುತ್ತೇವೆಂದು ಅವರಿಗೆ ಹೇಳಿದ್ದೇವೆ. ಅವರೂ ಸಹ ಅದನ್ನು ಒಪ್ಪಿಕೊಂಡಿದ್ದಾರೆ.

ಅಧ್ಯಕ್ಷರು: ಕೋನ ರೆಡ್ಡಿಯವರಿಲ್ಲ, ಈಶ್ವರ ಖಂಡ್ರೆಯವರು ವಿಷಯ ಪ್ರಸ್ತಾಪಿಸುವುದು.

(2) ವಿಷಯ: ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕಿನ ಕೃಷಿ ಮಾರುಕಟ್ಟೆಯಲ್ಲಿ ತೊಗರಿಯನ್ನು ಖರೀದಿಸುವ ಬಗ್ಗೆ.

ಶ್ರೀ ಈಶ್ವರ ಖಂಡ್ರೆ [ಭಾಲ್ಕಿ]: ಮಾನ್ಯ ಅಧ್ಯಕ್ಷರೆ, ನನ್ನ ತಾಲ್ಲೂಕಿನ ಭಾಲ್ಕಿಯಲ್ಲಿ ಇವತ್ತು ಬೆಳಗ್ಗಿನಿಂದ ತೊಗರಿ ಖರೀದಿ ಮಾಡುವುದನ್ನು ಸ್ಥಗಿತಗೊಳಿಸಿದ್ದಾರೆ. ಸುಮಾರು ದಿವಸಗಳ ಹಿಂದೆ ಸರ್ಕಾರ ಘೋಷಣೆ ಮಾಡಿದ ಬೆಂಬಲ ಬೆಲೆಯಲ್ಲಿ ತೊಗರಿ ಬೆಳೆಯನ್ನು ಖರೀದಿ ಮಾಡುವುದನ್ನು ಪ್ರಾರಂಭಿಸಿದ ಮೇಲೆ 1119 ರೈತರು ತೊಗರಿ ಖರೀದಿಗೆ ನೋಂದಣಿ ಮಾಡಿದ್ದಾರೆ. ಅದರಲ್ಲಿ 235 ಜನ ರೈತರ ತೊಗರಿ ಖರೀದಿಯಾಗಿದೆ. ಇನ್ನೂ 900 ರೈತರು ಕಾಯುತ್ತಿದ್ದಾರೆ. ಇವತ್ತು ಬೆಳಗ್ಗಿನಿಂದ ಅನುದಾನ ಬಂದಿಲ್ಲವೆಂದು NCDC ನವರು ಮತ್ತು ಕೃಷಿ ಉತ್ಪನ್ನ ಮಾರುಕಟ್ಟೆ

ಸಮಿತಿಯವರು ಖರೀದಿ ಮಾಡುವುದನ್ನು ಬಂದ್ ಮಾಡಿದ್ದಾರೆ. ರೈತರು ಅಲ್ಲಿ ಹೋರಾಟ ಮಾಡುತ್ತಿದ್ದಾರೆ. ಹಾಗಾಗಿ ಇದನ್ನು ಮುಂದುವರೆಸಬೇಕೆಂದು ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಮಾನ್ಯ ತೋಟಗಾರಿಕೆ, ಕೃಷಿ ಮಾರುಕಟ್ಟೆ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಭಾವನೆ ಮತ್ತು ಆತಂಕ ಏನೆಂದು ನನಗೆ ಅರ್ಥವಾಗುತ್ತಿದೆ. ಸರ್ಕಾರ ಇವತ್ತೇ ಅದಕ್ಕೆ ತತ್‌ಕ್ಷಣ ಕ್ರಮ ತೆಗೆದುಕೊಂಡು ಹಣ ಬಿಡುಗಡೆ ಮಾಡುತ್ತದೆ. ರಿಜಿಸ್ಟರ್ ಆಗಿರತಕ್ಕಂತಹ 900 ಜನ ರೈತರೇನಿದ್ದಾರೆ, ಅವರು ಆತಂಕ ಪಡಬೇಕಾಗಿಲ್ಲ. ಅದನ್ನು ಕೊಂಡುಕೊಳ್ಳುವ ಕೆಲಸಕ್ಕೆ ಇವತ್ತೇ ಕಾರ್ಯಕ್ರಮ ರೂಪಿಸುತ್ತೇವೆ.

(3) **ವಿಷಯ:** ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವ ಬಗ್ಗೆ.

ಶ್ರೀ ಎನ್. ಹೆಚ್. ಕೋನರೆಡ್ಡಿ (ನವಲಗುಂದ): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ರಚನೆ ಮಾಡುವುದಾಗಿ ಹಿಂದಿನ ಸರ್ಕಾರ ಏನು ಘೋಷಣೆ ಮಾಡಿತ್ತು, ಈಗಿನ ಸರ್ಕಾರ ತಾಲ್ಲೂಕುಗಳ ರಚನೆ ಮಾಡುವುದರ ಬಗ್ಗೆ ಆಯವ್ಯಯದಲ್ಲಿ ಯಾವುದೇ ನಿರ್ಧಾರವನ್ನು ಘೋಷಣೆ ಮಾಡಿಲ್ಲ. ಈ ಸರ್ಕಾರ ಏನು ಮಾಡುತ್ತದೆ ಎಂದು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಟಿ.ಬಿ. ಜಯಚಂದ್ರ: ನಿಮ್ಮ ಪ್ರಶ್ನೆಯೇ ಬೇರೆ ಇದೆ. ರಾಜ್ಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಷಯ ಇಲ್ಲಿ ಪ್ರಸ್ತಾಪವಾಗಿದೆ.

ಶ್ರೀ ಎನ್.ಹೆಚ್. ಕೋನರೆಡ್ಡಿ (ನವಲಗುಂದ): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ನಗರ ಸ್ಥಳೀಯ ಸಂಸ್ಥೆಗಳಾದ ಮಹಾ ನಗರಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಚುನಾವಣೆ ನಡೆದು ಒಂದು ವರ್ಷವಾಯಿತು. ಸರ್ಕಾರದ ಮೀಸಲಾತಿಗಳನ್ನು ನಿಗದಿಪಡಿಸುವಲ್ಲಿ ಕೆಲವು ತೊಂದರೆಗಳಾಗಿವೆ ಎಂದು ಕೆಲವರು ಕೋರ್ಟಿಗೆ ಹೋಗಿದ್ದಾರೆ. ಇದುವರೆಗೆ